ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ – ೯

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತನಾಲ್ಕನೇ ಅಧಿವೇಶನ

ಶುಕ್ರವಾರ, ದಿನಾಂಕ: ೨೩ನೇ ಫೆಬ್ರವರಿ, ೨೦೧೮

---

## ಸಮೂಹ – V

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

೩. ಉನ್ನತ ಶಿಕ್ಷಣ ಸಚಿವರು

೪. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು

೫. ಸಾರಿಗೆ ಸಚಿವರು

೬. ಗಣಿ ಮತ್ತು ಭೂವಿಜ್ಞಾನ ಸಚಿವರು

೭. ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ರಾಜ್ಯ ಸಚಿವರು

---

### BRC/CRC ಗಳ ಸೇವೆಯನ್ನು ಮುಂದುವರೆಸುವ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ( ಶಿಕ್ಷಕರ ಕ್ಷೇತ್ರ)–**

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ)–**

೧೨೧ (೧೦೯೧+೧೦೯೨) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) NRDWP ಯೋಜನೆಯಡಿ ೨೦೧೧-೧೨ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ BRC/CRC ಗಳನ್ನು ಯಥಾವತ್ತು ಮುಂದುವರೆಸುವ ಸಂಬಂಧ ಕಡತ ಸಂಖ್ಯೆ ಗ್ರಾಅಪರ್‌ಗ್ರಾನೀಸ(೨)೨೦೧೫ ಕಂಡಿಕೆ ೪೩.೪೪.೪೫ ಮತ್ತು ೭೪ರಲ್ಲಿ ಮಾಡಿರುವ ಆದೇಶವೇನು ; (ವಿವರವಾದ ಮಾಹಿತಿ ನೀಡುವುದು)

(ಆ) ಸರ್ಕಾರಿ ಆದೇಶ ಹೊರಡಿಸದೆ ಕೇವಲ ದಿನಾಂಕ: ೦೩.೧೧.೨೦೧೭ರಂದು ಪತ್ರ ಬರೆದಿರುವುದು ನಿಜವೇ ; ಸದರಿ ಪತ್ರದ ಅನುಸಾರ ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಅಧಿಕಾರಿಗಳು ಸರ್ಕಾರದ ನಿರ್ಣಯದಂತೆ ಕ್ರಮ ಕೈಗೊಳ್ಳುತ್ತಾರೆಂದು ಸರ್ಕಾರ ಭರವಸೆ ನೀಡಿರುವುದು ನಿಜವೇ ;

(ಇ) ಹಾಗಾದರೆ, ದಿನಾಂಕ: ೦೩.೧೧.೨೦೧೭ರ ಸರ್ಕಾರದ ಪತ್ರದ ಅನುಸಾರ ಎಷ್ಟು ಜಿಲ್ಲಾ ಪಂಚಾಯಿತಿಗಳಲ್ಲಿ ಎಷ್ಟು BRC/CRC ಗಳನ್ನು ಸರ್ಕಾರದ ನಿರ್ಣಯ ಕಂಡಿಕೆ ೪೫, ೭೪ ರಂತೆ ಕ್ರಮ ಕೈಗೊಂಡು ಆದೇಶ ಹೊರಡಿಸಲಾಗಿರುತ್ತದೆ ; ವಿವರವಾದ ಮಾಹಿತಿ ನೀಡುವುದು ;

(ಈ) ಸರ್ಕಾರದ ಆದೇಶದಂತೆ ಸಿಇಓರವರು ಕ್ರಮ ಕೈಗೊಳ್ಳದಿದ್ದರೆ, ಸರ್ಕಾರ ನಿರುದ್ಯೋಗಿ ಪದವೀಧರ BRC/CRC ಗಳಿಗೆ ಯಾವ ರೀತಿ ನ್ಯಾಯ ಒದಗಿಸುತ್ತದೆ ;

(ಉ) ಇದರ ಸಂಬಂಧ ಸರ್ಕಾರದ ನಿಲುವೇನು ; ಸರ್ಕಾರಿ ಆದೇಶವನ್ನು ಯಾವ ಕಾಲಮಿತಿಯೊಳಗೆ ಹೊರಡಿಸಲಾಗುವುದು ? (ವಿವರವಾದ ಮಾಹಿತಿ ನೀಡುವುದು)

## ಸ್ನಾತಕೋತ್ತರ ಪದವಿ ಪಡೆದ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲಾ ಸಹ ಶಿಕ್ಷಕರುಗಳ ಮುಂಬಡ್ತಿ ವಿಚಾರದಲ್ಲಿ ೫೦:೫೦ (ನೇರ ಬಡ್ತಿ) ಅನುಪಾತದಂತೆ ತಿದ್ದುಪಡಿ ತರುವ ಕುರಿತು.

**ಶ್ರೀ ರಾಮಚಂದ್ರಗೌಡ ( ಪದವೀಧರರ ಕ್ಷೇತ್ರ)–**

೧೨೨ (೧೧೯೫) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸ್ನಾತಕೋತ್ತರ ಪದವಿ ಪಡೆದ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲಾ ಸಹಶಿಕ್ಷಕರುಗಳು ಯಾವ ಹುದ್ದೆಯ ಮುಂಬಡ್ತಿಗೆ ಅರ್ಹರಿರುತ್ತಾರೆ ; ಈ ರೀತಿಯ ಎಷ್ಟು ಸಹ ಶಿಕ್ಷಕರುಗಳು ಮುಂಬಡ್ತಿಯ ನಿರೀಕ್ಷೆಯಲ್ಲಿದ್ದಾರೆ ; ಎಷ್ಟು ವರ್ಷಗಳಿಂದ ಇದುವರೆವಿಗೂ ಮುಂಬಡ್ತಿ ನೀಡಲಾಗಿರುವುದಿಲ್ಲ ;

(ಆ) ಸ್ನಾತಕೋತ್ತರ ಪದವಿ ಪಡೆದ ಪ್ರೌಢಶಾಲಾ ಸಹಶಿಕ್ಷಕರಿಗೆ ಪದವಿ ಪೂರ್ವ ಕಾಲೇಜು ಉಪನ್ಯಾಸಕರಾಗಿ ಮುಂಬಡ್ತಿ ನೀಡುವಲ್ಲಿ ವಿಳಂಬವಾಗಿರುವುದು ನಿಜವೇ ; (ವಿವರ ನೀಡುವುದು)

(ಇ) ಮುಂಬಡ್ತಿ ನೀಡುವಲ್ಲಿ ವಿಳಂಬವಾಗಿರುವುದರಿಂದ, ಈ ಸಂಬಂಧ ನೇರ–೭೫, ಬಡ್ತಿ–೨೫ ಅನುಪಾತವನ್ನು ರದ್ದುಪಡಿಸಿ, ೫೦:೫೦ರ ಅನುಪಾತದಲ್ಲಿ ತಿದ್ದುಪಡಿ ತಂದು ಹಿಂದಿನ ನಿಯಮದನ್ವಯ ಮುಂಬಡ್ತಿಯನ್ನು ೩ ತಿಂಗಳ (ಜನವರಿ–೨೦೧೮)ರೊಳಗೆ ಕ್ರಮ ತೆಗೆದುಕೊಳ್ಳುವ ಆಶ್ವಾಸನೆ ನೀಡಿರುವುದು ನಿಜವೇ ; (ವಿವರ ನೀಡುವುದು)

(ಈ) ಸದರಿ ಮುಂಬಡ್ತಿ ಪ್ರಕ್ರಿಯೆಯು ಎಲ್ಲಿಯವರೆಗೆ ಅನುಷ್ಠಾನಕ್ಕೆ ಬಂದಿರುತ್ತದೆ ? (ವಿವರ ನೀಡುವುದು)

## ಶಿಕ್ಷಕರಿಗೆ ಸಿಗಬೇಕಾದ ಸವಲತ್ತು ಸರಿಯಾದ ಸಮಯದಲ್ಲಿ ನೀಡದೆ ತೊಂದರೆ ಮಾಡುತ್ತಿರುವ ಬಗ್ಗೆ

**ಶ್ರೀ ಘೋಟ್ನೆಕರ ಶ್ರೀಕಾಂತ್ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೨೩. (೫೯೮) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಾರವಾರ ಜಿಲ್ಲೆಯ, ಜೋಯಿಡಾ ತಾಲ್ಲೂಕಿನ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಿಗೆ ೧೦ ವರ್ಷ ಕಾಲಮಿತಿ ವೇತನ ಬಡ್ತಿ (ಟೈಮ್‌ಬಾಂಡ್)ಯನ್ನು ಜಾರಿಗೊಳಿಸಲು ಸಂಬಂಧಿತ ದಾಖಲೆಗಳನ್ನು ಶಿಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಗೆ ಒದಗಿಸಿದ್ದರೂ ಸಹ, ಅವರಿಗೆ ವೇತನ ಬಡ್ತಿ ಪತ್ರ ಲಭಿಸಲು ಕೇಳಿದಷ್ಟು ಲಂಚ ನೀಡಬೇಕಾದ ಸ್ಥಿತಿ ತಲೆದೋರಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; (ವಿವರ ನೀಡುವುದು)

(ಆ) ಶಿರಸಿ ಶೈಕ್ಷಣಿಕ ವ್ಯಾಪ್ತಿಯ ತಾಲ್ಲೂಕಿಗೆ ಸಂಬಂಧಿಸಿದಂತೆ ಎಷ್ಟು ಶಿಕ್ಷಕರಿಗೆ ೧೦ ವರ್ಷದ ಸೇವೆ ಸಲ್ಲಿಸಿದ ಬಗ್ಗೆ ವೇತನ ಬಡ್ತಿ ನೀಡಬೇಕಾಗಿರುತ್ತದೆ ; (ವಿವರ ನೀಡುವುದು)

(ಇ) ತಾಲ್ಲೂಕುವಾರು ಅವರ ಹೆಸರು, ಸೇವೆ ಸಲ್ಲಿಸುತ್ತಿರುವ ಸ್ಥಳ, ನೀಡಬೇಕಾದ ವೇತನ ಬಡ್ತಿ ವಿವರ ನೀಡುವುದು ; ವಿಳಂಬವಾದಲ್ಲಿ ಇಲ್ಲಿಯವರೆಗೆ ಯಾವ ಕಾರಣಕ್ಕಾಗಿ ವಿಳಂಬವಾಗಿರುತ್ತದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಸಂಬಂಧಿಸಿದ ಶಿಕ್ಷಕರಿಗೆ ಸಮಯಕ್ಕೆ ಸರಿಯಾಗಿ ಸರ್ಕಾರದಿಂದ ಸಿಗಬೇಕಾದ ಸವಲತ್ತು ನೀಡಲು ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಎಸ್.ಡಿ.ಎಂ.ಸಿ. ರಚನೆಯಾಗದೆ ಇರುವ ಶಾಲೆಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೨೪ (೯೩೨) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗುಣಮಟ್ಟದ ಶಿಕ್ಷಣದ ಉದ್ದೇಶಕ್ಕಾಗಿ ಎಸ್.ಡಿ.ಎಂ.ಸಿ. ಸಮಿತಿಯನ್ನು ಯಾವ ಮಾರ್ಗಸೂಚಿಯನ್ವಯ ರಚಿಸಲಾಗುವುದು ; (ವಿವರ ನೀಡುವುದು)

(ಆ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಎಸ್.ಡಿ.ಎಂ.ಸಿ. ಸಮಿತಿಯನ್ನು ಎಷ್ಟು ಶಾಲೆಗಳಲ್ಲಿ ರಚಿಸಲಾಗಿದೆ ; ಎಷ್ಟು ಶಾಲೆಗಳಲ್ಲಿ ರಚಿಸಿಲ್ಲ ;

(ಇ) ಎಸ್.ಡಿ.ಎಂ.ಸಿ. ಸಮಿತಿಯನ್ನು ರಚಿಸದೇ ಇರುವುದಕ್ಕೆ ಕಾರಣವೇನು ; ಇದನ್ನು ರಚನೆ ಮಾಡುವ ಅಧಿಕಾರ ಯಾರಿಗಿದೆ ; ರಚನೆಯಾಗದೇ ಇರುವ ಶಾಲೆಗಳ ಮುಖ್ಯ ಗುರುಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ? (ಶಾಲಾವಾರು ವಿವರ ನೀಡುವುದು)

## ಸರ್ಕಾರಿ ಪ್ರಾಯೋಜಿತ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮೂಲಕ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೨೫ (೧೧೫೪) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಪ್ರಾಯೋಜಿತ ಕೆ.ಆರ್.ಐ.ಡಿ.ಎಲ್ (KRIDL) ಸಂಸ್ಥೆ ಮೂಲಕ ಕಾಮಗಾರಿಗಳನ್ನು ನಿರ್ವಹಿಸುವ ಸಂದರ್ಭದಲ್ಲಿ, ನಿರ್ವಹಣಾ ವೆಚ್ಚ ಮತ್ತು ತೆರಿಗೆಗಳನ್ನು ಎಷ್ಟು ಪ್ರಮಾಣದಲ್ಲಿ ತೆಗೆದುಕೊಳ್ಳಲಾಗುತ್ತಿದೆ ;

(ಆ) ಈ ಲಾಭಾಂಶದ ಹಣವನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ ;

(ಇ) ಈ ಸಂಸ್ಥೆಯಲ್ಲಿ ಎಷ್ಟು ಜನ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ ; ಇದರಲ್ಲಿ ಖಾಯಂ ಆಗಿ ಎಷ್ಟು ಜನ ಮತ್ತು ಗುತ್ತಿಗೆ ಆಧಾರದಲ್ಲಿ ಎಷ್ಟು ಜನ ಕಾರ್ಯ ನಿರ್ವಹಿಸುತ್ತಿದ್ದಾರೆ ;

(ಈ) ಒಟ್ಟು ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಸಂಬಳ ಹಾಗೂ ಇತರೆ ಸೌಲಭ್ಯಕ್ಕಾಗಿ ಎಷ್ಟು ಹಣ ವ್ಯಯವಾಗುತ್ತಿದೆ ;

(ಉ) ೨೦೦೩ ರಿಂದ ೨೦೧೮ರವರೆಗೆ ಈ ಸಂಸ್ಥೆಯು ಎಷ್ಟು ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ ?

## ವಿಶ್ವವಿದ್ಯಾಲಯಗಳ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ)–**

೧೨೬ (೧೧೪೭) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕದಲ್ಲಿ ಒಟ್ಟು ಎಷ್ಟು ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ ; ಇವುಗಳಲ್ಲಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು ; ಯಾವ ಯಾವ ವಿಶ್ವವಿದ್ಯಾಲಯಗಳು ಯಾವ ಯಾವ ವಿಷಯಗಳ ಮೇಲೆ ಎಷ್ಟು ಪದವಿ ಕಾಲೇಜುಗಳನ್ನು ಮತ್ತು ಸ್ನಾತಕೋತ್ತರ ಕೇಂದ್ರಗಳನ್ನು ನಡೆಸುತ್ತಿವೆ ; (ವಿಷಯವಾರು, ಕಾಲೇಜುವಾರು ಹಾಗೂ ಸ್ನಾತಕೋತ್ತರವಾರು ವಿವರಗಳನ್ನು ನೀಡುವುದು)

(ಆ) ಕರ್ನಾಟಕದಲ್ಲಿ ಯಾವ ಯಾವ ಖಾಸಗಿ ವಿಶ್ವವಿದ್ಯಾಲಯಗಳಿಗೆ ಯಾವ ಯಾವ ವರ್ಷದಿಂದ ಅನುಮತಿ ನೀಡಲಾಗಿರುತ್ತದೆ ; ಅನುಮತಿ ನೀಡಿದ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಅವುಗಳ ಪ್ರಾರಂಭಕ್ಕೆ ವಿಧಿಸಿರುವ ನಿಯಮಗಳು ಮತ್ತು ಷರತ್ತುಗಳು ಯಾವುವು ಷರತ್ತುಗಳಿಗೆ ಅನುಗುಣವಾಗಿ ಖಾಸಗಿ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆಯೇ ; ಇಲ್ಲದೇ ಇದ್ದಲ್ಲಿ ಯಾವ ಯಾವ ಖಾಸಗಿ ವಿಶ್ವವಿದ್ಯಾಲಯಗಳು ಷರತ್ತು ಉಲ್ಲಂಘನೆ ಮಾಡಿರುತ್ತವೆ ;

(ಇ) ಷರತ್ತುಗಳನ್ನು ಉಲ್ಲಂಘನೆ ಮಾಡಿರುವ ಖಾಸಗಿ ವಿಶ್ವವಿದ್ಯಾಲಯಗಳ ಮೇಲೆ ರಾಜ್ಯ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿರುತ್ತದೆ ; ಕೈಗೊಂಡಿದ್ದಲ್ಲಿ ಅದರ ವಿವರಗಳನ್ನು ನೀಡುವುದು ;

(ಈ) ರಾಜ್ಯದ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಉಪ ಕುಲಪತಿಗಳು ನೇಮಕಗೊಂಡಿರುತ್ತಾರೆಯೇ ; ನೇಮಕಗೊಂಡಿದ್ದಲ್ಲಿ, ಅವರ ವಿವರಗಳನ್ನು ನೇಮಕದ ದಿನಾಂಕ ಸಹಿತವಾಗಿ ಮತ್ತು ಅವರ ವಿದ್ಯಾರ್ಹತೆ ಅನುಭವ ಸಹಿತವಾಗಿ ನೀಡುವುದು ?

## ನೂತನ ಗ್ರಾಮ ಪಂಚಾಯತ್‌ಗಳ ಸ್ವಂತ ಕಟ್ಟಡ ಹಾಗೂ ಸ್ಥಳ ಮಂಜೂರಾತಿ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೨೭ (೧೦೮೬) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ನೂತನವಾಗಿ ಮಂಜೂರಾದ ಗ್ರಾಮ ಪಂಚಾಯತ್‌ಗಳೆಷ್ಟು ; ಅವು ಯಾವುವು ; (ಜಿಲ್ಲಾವಾರು ವಿವರ ನೀಡುವುದು)

(ಆ) ನೂತನವಾಗಿ ಮಂಜೂರಾದ ಗ್ರಾಮ ಪಂಚಾಯತ್‌ಗಳಲ್ಲಿ, ಬಾಡಿಗೆ ಕಟ್ಟಡ ಅಥವಾ ಇತರೆ ಕಟ್ಟಡಗಳಲ್ಲಿ ಕಾರ್ಯಾಚರಿಸುತ್ತಿರುವ ಗ್ರಾಮ ಪಂಚಾಯತ್‌ಗಳು ಎಷ್ಟು ; ಯಾವುವು ;

(ಇ) ನೂತನ ಗ್ರಾಮ ಪಂಚಾಯತ್‌ಗಳಿಗೆ ಕಟ್ಟಡ ನಿರ್ಮಿಸಲು ಎಷ್ಟು ಗ್ರಾಮ ಪಂಚಾಯಿತಿಗಳಿಗೆ ಸ್ಥಳ ಮಂಜೂರಾತಿಯಾಗಿದೆ ; ಸ್ಥಳ ಮಂಜೂರಾತಿಯಾಗದ ಗ್ರಾಮ ಪಂಚಾಯಿತಿಗಳೆಷ್ಟು ; ಸ್ಥಳ ಮಂಜೂರಾತಿಯಾಗಿದ್ದು, ವಿವಿಧ ಕಾರಣಗಳಿಗಾಗಿ ಕಟ್ಟಡ ರಚನೆಗೆ ತಡೆಹಿಡಿಯಲ್ಪಟ್ಟ ಗ್ರಾಮ ಪಂಚಾಯತ್‌ಗಳ ಸಂಖ್ಯೆ ಎಷ್ಟು ; ಯಾವುವು ?

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅನುದಾನದ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು)–**

೧೨೮ (೧೦೫೬) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ನಾಲ್ಕು ವರ್ಷಗಳಿಂದ ಇಲಾಖೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ; (ವರ್ಷಾವಾರು ಮಾಹಿತಿ ನೀಡುವುದು)

(ಆ) ಬಿಡುಗಡೆಯಾಗಿರುವ ಅನುದಾನದಲ್ಲಿ ವೆಚ್ಚ ಮಾಡಿರುವುದು ಎಷ್ಟು ? (ವರ್ಷಾವಾರು ಮಾಹಿತಿ ನೀಡುವುದು)

## ಪ್ರಥಮ ದರ್ಜೆ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಿಗೆ ಕೇಂದ್ರ ಸರ್ಕಾರದ UGC ೭ನೇ ವೇತನ ಆಯೋಗದ ವೇತನ ಶ್ರೇಣಿಗಳನ್ನು ಜಾರಿ ಮಾಡುವ ಕುರಿತು.

**ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)–**

೧೨೯ (೧೦೬೫) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಪ್ರಥಮ ದರ್ಜೆ ಕಾಲೇಜಿನ ಹಾಗೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ಕೇಂದ್ರ ಸರ್ಕಾರದ UGC ೭ನೇ ವೇತನ ಆಯೋಗ ಶಿಫಾರಸ್ಸು ಮಾಡಿದ ವೇತನ ಶ್ರೇಣಿಗಳನ್ನು ಇದುವರೆಗೆ ಏಕೆ ಜಾರಿ ಮಾಡಿರುವುದಿಲ್ಲ ;

(ಆ) ಇದಕ್ಕೆ ಸಂಬಂಧಿಸಿದಂತೆ ಯಾವ ಅಡೆತಡೆಗಳು ಇವೆ ? (ವಿವರ ನೀಡುವುದು)

## ವಾಹನಗಳಿಗೆ ಸ್ಪೀಡ್ ಗವರ್ನರ್ ಅಳವಡಿಕೆ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)–**

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ)–**

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮ ನಿರ್ದೇಶನ ಹೊಂದಿದವರು)–**

೧೩೦ (೧೧೧೧+೧೧೧೧+೧೧೧೨) ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯದಲ್ಲಿ ವಾಹನಗಳಿಗೆ ಸ್ಪೀಡ್ ಗವರ್ನ್‌ರ್ ಅಳವಡಿಸಲು ಯಾವ ಕಂಪನಿಗಳಿಗೆ ಅನುಮತಿ ನೀಡಲಾಗಿದೆ ; (ಹೆಸರು ವಿಳಾಸ ಸಹಿತ ವಿವರ ನೀಡುವುದು)

(ಆ) ಸ್ಪೀಡ್ ಗವರ್ನರ್ ವಾಹನಗಳಿಗೆ ಅಳವಡಿಸುತ್ತಿರುವ ಬಗ್ಗೆ ಕೇಂದ್ರ ಸರ್ಕಾರವು ದಿನಾಂಕ: ೦೨.೦೮.೨೦೧೬ ಹಾಗೂ ದಿನಾಂಕ: ೧೦.೦೨.೨೦೧೭ರ ಪತ್ರ ಸಂಖ್ಯೆ ಆರ್‌ಟಿ–೧೧೦೧೭/೧೩/೨೦೦೫–ಎಂವಿಎಲ್ ಮಾರ್ಗಸೂಚಿಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ೨೦೦೯ರ ಮಾರ್ಗಸೂಚಿ ಅಳವಡಿಸಿ ವಾಹನಗಳಿಗೆ ಸ್ಪೀಡ್ ಗವರ್ನರ್ ಅಳವಡಿಸುವ ಕಂಪನಿಗಳಿಗೆ ಅನುಮತಿ ನೀಡಿರುವುದರಿಂದ ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಹೆಚ್ಚಿನ ದರ ನಿಗದಿಪಡಿಸಿ, ವಾಹನ ಮಾಲೀಕರನ್ನು ಸುಲಿಗೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದಲ್ಲಿ, ಸರ್ಕಾರವು ಈ ಕಂಪನಿಗಳಿಗೆ ನೀಡಿರುವ ಅನುಮತಿಯನ್ನು ರದ್ದುಪಡಿಸಲು ಇರುವ ಸಮಸ್ಯೆಗಳೇನು ; (ವಿವರ ನೀಡುವುದು)

(ಈ) ಈ ಕಂಪನಿಗಳಿಗೆ ಅನುಮತಿ ನೀಡುವಾಗ ಕೇಂದ್ರ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಲಾಗಿದೆಯೇ ; (ವಿವರ ನೀಡುವುದು)

(ಉ) ಕೇಂದ್ರ ಸರ್ಕಾರದ ೨೦೧೬–೨೦೧೭ರ ಮಾರ್ಗಸೂಚಿಗಳನ್ವಯ ಹೊಸದಾಗಿ ವಾಹನಗಳಿಗೆ ಸ್ಪೀಡ್ ಗವರ್ನರ್ ಅಳವಡಿಸಲು ಪಾರದರ್ಶಕ ನಿಯಮಗಳನ್ನು ಅನುಸರಿಸಿ ಯಾವ ಕಾಲಮಿತಿಯಲ್ಲಿ ಅನುಮತಿ ನೀಡಲಾಗುವುದು ? (ವಿವರ ನೀಡುವುದು)

## ಬೀದರ್ ಜಿಲ್ಲೆಗೆ ಮಂಜೂರಾದ ಶುದ್ಧ ಕುಡಿಯುವ ನೀರಿನ ಘಟಕದ ಬಗ್ಗೆ

**ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೩೧ (೧೦೬೩) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಗೆ ಮಂಜೂರಾದ ಶುದ್ಧ ಕುಡಿಯುವ ನೀರಿನ ಘಟಕದ ಸಂಖ್ಯೆಗಳು ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಮಂಜೂರಾದ ಘಟಕಗಳಲ್ಲಿ ಸಾರ್ವಜನಿಕರಿಗೆ ನಿರಂತರ ಸೇವೆ ಒದಗಿಸುತ್ತಿರುವ ಘಟಕಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಕಾರ್ಯ ನಿರ್ವಹಿಸದೆ ಇರುವ ಘಟಕಗಳ ಸಂಖ್ಯೆ ಎಷ್ಟು ; ಇದರ ದುರಸ್ತಿ ಕಾರ್ಯದ ಜವಾಬ್ದಾರಿ ಯಾರ ಮೇಲಿದೆ ; ಇದನ್ನು ಎಷ್ಟು ಅವಧಿಯೊಳಗೆ ದುರಸ್ತಿಗೊಳಿಸಲಾಗುವುದು ; (ವಿವರ ನೀಡುವುದು)

(ಈ) ಕಳೆದ ಎರಡು ವರ್ಷಗಳಲ್ಲಿ ಈ ಘಟಕ ಯೋಜನೆಗೆ ಮಂಜೂರಾದ ಮೊತ್ತ ಎಷ್ಟು ; ಇದರಲ್ಲಿ ವಿನಿಯೋಗವಾದ ಮೊತ್ತ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

## ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು

**ಶ್ರೀ ಬಿ. ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)–**

೧೩೨ (೧೧೩೬) ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು ಸ್ಥಗಿತಗೊಂಡಿರುವುದು ನಿಜವೇ ;

(ಆ) ಹಾಗಿದ್ದರೆ, ರಾಜ್ಯದಲ್ಲಿರುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳೆಷ್ಟು ; ಇವುಗಳ ಪೈಕಿ ಎಷ್ಟು ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು ಸ್ಥಗಿತಗೊಂಡಿವೆ ; ೨೦೧೩–೧೪ ರಿಂದ ೨೦೧೭–೧೮ನೇ ಸಾಲಿನವರೆಗೆ ಸ್ಥಗಿತಗೊಂಡಿರುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಸಂಖ್ಯೆಯ ವಿವರವನ್ನು ಜಿಲ್ಲಾವಾರು ನೀಡುವುದು ;

(ಇ) ಸ್ಥಗಿತಗೊಂಡಿರುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಪದವಿ ಪೂರ್ವ ಕಾಲೇಜು ಸ್ಥಾಪಿಸುವ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು)–**

೧೩೩ (೧೧೫೮) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೮–೧೯ನೇ ಸಾಲಿನಲ್ಲಿ ರಾಜ್ಯಾದ್ಯಂತ ಎಷ್ಟು ಹೊಸ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ ;

(ಆ) ಹೊಸ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಿದ ಸಂದರ್ಭದಲ್ಲಿ ಅವಶ್ಯಕತೆ ಇರುವ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ತಿಮ್ಮಪ್ಪಯ್ಯನ ಹಳ್ಳಿ ಗ್ರಾಮ ಹಾಗೂ ಮುಷ್ಠಲಗುಮ್ಮಿ ಗ್ರಾಮಗಳಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ ?

## ಪದವಿ ಕಾಲೇಜುಗಳಲ್ಲಿರುವ ಖಾಲಿ ಹುದ್ದೆ ಭರ್ತಿ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)–**

೧೩೪ (೧೦೭೩) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿಯಾಗಿರುವ ಹುದ್ದೆಗಳ ಭರ್ತಿಗೆ ಅವಕಾಶ ಕಲ್ಪಿಸಲಾಗಿದೆಯೇ ;

(ಆ) ಎಷ್ಟು ಹುದ್ದೆಗಳ ಭರ್ತಿಗೆ ಅವಕಾಶ ಕಲ್ಪಿಸಲಾಗಿದೆ ;

(ಇ) ಈ ಹುದ್ದೆಗಳ ಭರ್ತಿಗೆ ಇರುವಂತಹ ರೋಷ್ಟರ್ ನಿಯಮಾವಳಿಗಳ ಸಂಪೂರ್ಣ ವಿವರ ನೀಡುವುದು ;

(ಈ) ಈ ನಿಯಮಾವಳಿಗಳನ್ನು ಬದಲಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಮೀಸಲಾತಿ ನಿಯಮಾವಳಿಗಳನ್ನು ಅಳವಡಿಸಿಕೊಳ್ಳುವ ಕುರಿತು ಸರ್ಕಾರದ ನಿಲುವೇನು ?

## ಧಾರವಾಡ ನಗರದಿಂದ ವಿಶ್ವವಿದ್ಯಾಲಯಕ್ಕೆ ಹೋಗಲು ರೈಲ್ವೆ ಕ್ರಾಸ್ ಅಡ್ಡವಿದ್ದು ಇದರಿಂದ ಉಂಟಾಗುವ ತೊಂದರೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)–**

೧೩೫(೧೧೦೫) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಧಾರವಾಡ ನಗರದಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹೋಗಲು ರೈಲ್ವೆ ಕ್ರಾಸ್ ಒಂದು ಅಡ್ಡವಿದ್ದು, ಪ್ರತಿ ೧೫ ನಿಮಿಷಕ್ಕೊಮ್ಮೆ ರೈಲಿನ ಚಲನವಲನಕ್ಕಾಗಿ ಗೇಟನ್ನು ಮುಚ್ಚಲಾಗುತ್ತಿದ್ದು, ವಿಶ್ವವಿದ್ಯಾಲಯಕ್ಕೆ ಹೋಗುವ ಮತ್ತು ಬರುವ ವಿದ್ಯಾರ್ಥಿಗಳಿಗೆ, ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ೬೦ ವರ್ಷಗಳ ಹಿಂದೆ ಇದ್ದ ಸಂಚಾರ ಸ್ಥಿತಿಯು ಈಗ ಹೆಚ್ಚಾಗಿರುವುದರಿಂದ ಅದಕ್ಕೆ ತಕ್ಕಂತೆ ಮೂಲಭೂತ ಸಂಚಾರಿ ಸೌಕರ್ಯಗಳನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿಯಲ್ಲವೇ ;

(ಇ) ಈ ಸಮಸ್ಯೆಯ ಪರಿಹಾರಕ್ಕಾಗಿ ರೈಲು ಸಂಚಾರ ಹಾಗೂ ವಾಹನಗಳ ಸಂಚಾರ ದಟ್ಟಣೆ ಇರುವ ಈ ಸ್ಥಳದಲ್ಲಿ ಒಂದು ಮೇಲು ಸೇತುವೆ ಅಥವಾ ಅಂಡರ್ ಪಾಸ್ ನಿರ್ಮಾಣಕ್ಕೆ ಸರ್ಕಾರ ಮುಂದಾಗುವುದೇ ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕಾ.ಸೂ..989 ಪ್ರತಿಗಳು 1500 – ಪಿ8